ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.2258/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಆಜಾಮ್ | ಪಿ.ಡಬ್ಲ್ಯೂ.1 |
| ತಂದೆಯ ಹೆಸರು | : | ಇಕ್ಬಾಲ್ | ಸಿ.ಡಬ್ಲ್ಯೂ.1 |
| ವಯಸ್ಸು | : | 22 ವರ್ಷ | |
| ವೃತ್ತಿ | : | ವ್ಯಾಪಾರ | |
| ವಾಸ | : | ಟಿಪ್ಪುನಗರ, ಚಿಕ್ಕಮಗಳೂರು | |

ದಿನಾಂಕಃ 29-04-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ಆರೋಪಿ ನನಗೆ ಗೊತ್ತು. ಚಾಸಾ-4 ಮತ್ತು 5 ರವರು ಗೊತ್ತಿಲ್ಲ. ಚಾಸಾ-6 ರವರು ಗೊತ್ತು. ಆರೋಪಿಯು ನನ್ನ ಕಬ್ಬಿನ ಜ್ಯೂಸ್ ಗಾಡಿಗೆ ಪೆಟ್ರೋಲ್ ಅನ್ನು ಸುರಿದು ಬೆಂಕಿ ಹಚ್ಚಿ ನಷ್ಟ ಉಂಟು ಮಾಡಿರುವುದಿಲ್ಲ.

ದೂರನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-1(ಎ) ಇರುತ್ತದೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸ್ಥಳ ಮಹಜರ್ ಅನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-2(ಎ) ಇರುತ್ತದೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-</u>

ನಾನು ದಿಃ20.09.2025 ರಂದು ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ನಾನು ಚಿಕ್ಕಮಗಳೂರು ನಗರದ ಮಕ್ಕಳ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ ..... ಕಾನೂನು ಕ್ರಮ ಜರುಗಿಸಬೇಕೆಂದು ಕೋರುತ್ತೇನೆ' ಎಂದು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಿಃ20.09.2025 ರಂದು ಘಟನಾ ಸ್ಥಳದಲ್ಲಿ ಮಧ್ಯಾಹ್ನಃ03.45 ರಿಂದ 04.45 ರವರೆಗೆ ಪೊಲೀಸರು ನನ್ನ ಹಾಗೂ ಪಂಚರ ಸಮಕ್ಷಮ ನಿಪಿ-2 ರಂತೆ ಮಹಜರ್ ಅನ್ನು ತಯಾರಿಸಿ ಸ್ಥಳದಲ್ಲಿ ಸುಟ್ಟು ಕಪ್ಪಾಗಿರುವ ಕಬ್ಬಿನ ತುಂಡು, ಸುಟ್ಟಿರುವ ಗೂಗಲ್ ಪೇ ಸ್ಕ್ಯಾನರ್ ಮಷಿನ್, ಸುಟ್ಟಿರುವ 29 ಪೇಪರ್ ಲೋಟಗಳು ಹಾಗೂ ಖಾಲಿ ಬಿಸ್ಲೆರಿ ವಾಟರ್ ಬಾಟಲಿಯನ್ನು ಅಮಾನತ್ತುಪಡಿಸಿಕೊಂಡು ಫೋಟೋಗಳನ್ನು ತೆಗೆದಾಗ ನಾನು ಹಾಜರಿದ್ದು ನಿಪಿ-2(ಎ) ರಂತೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ).

C.C.No.2258/2025
PW-1 CW-1

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ